ಇಬ್ಬರಿಗೂ ವಿಷಯದ ಗಂಭೀರತೆ ಅರ್ಥವಾಯಿತು. ಈಗ ಅವರಿಗೆ ಹೆದರಿಕೆಯಾಗತೊಡಗಿತು.

'ನೀವೂ ಬೆಳಗ್ಗೆ ಪ್ರಿನ್ಸಿಪಾಲ್ ಛೇಂಬರಿನ ಬಳಿ ಬರಬೇಕು, ತಪ್ಪಿಸಿಕೊಳ್ಳುವ ಹಾಗಿಲ್ಲ...' ವಾರ್ಡನ್ ಗಂಭೀರವಾಗಿ ಹೇಳಿದರು.

'ಸರಿ... ಮೇಡಂ...' ಎಂದು ಇಬ್ಬರೂ ಹಾಸ್ಟೆಲಿನತ್ತ ನಡೆದರು. ತಮ್ಮ ರೂಮು ಸೇರುವವರೆಗೂ ಇಬ್ಬರೂ ಮಾತನಾಡಲಿಲ್ಲ. ಒಂದು ವಿಧದ ಭಯ, ಆತಂಕದಿಂದ ಅವರ ಬಾಯಿ ಕಟ್ಟಿ ಹೋಗಿತ್ತು... ವಾರ್ಡನ್ ಹತ್ತಿರ ಬರುವವರೆಗೂ ವಿಷಯದ ಗಂಭೀರತೆಯ ಬಗೆಗೆ ಭಯವಾಗಿರಲಿಲ್ಲ. ಈಗ ಅದು 'ಸಾಕ್ಷಿಯ ನಾಪತ್ತೆ'ಯ ವಿಷಯವಾಗಿತ್ತು.

★★★

ಮರುದಿನ ಬೆಳಗ್ಗೆ–

ಚಕ್ರವರ್ತಿ ಮೆಡಿಕಲ್ ಕಾಲೇಜು ಮತ್ತು ರಿಸರ್ಚ್ ಸೆಂಟರ್‌ನ ಪ್ರಿನ್ಸಿಪಾಲ್ ಛೇಂಬರಿನೊಳಗೆ ಎಲ್ಲರೂ ಸೇರಿದ್ದರು. ಸಾಕ್ಷಿಯ ತಂದೆತಾಯಿ, ಮೀರಾ ಮತ್ತು ಮಾನಸಿ, ಹಾಸ್ಟೆಲಿನ ವಾರ್ಡನ್ ಮತ್ತು ಡಾಕ್ಟರ್ ಶಿವಾನಂದ ಎಲ್ಲರೂ ಕುಳಿತಿದ್ದರು. ಮೊದಲು ಮಾನಸಿಯನ್ನೇ ಕೇಳಿದರು. ಅವಳು ಪ್ರಿನ್ಸಿಪಾಲ್ ಮುಂದೆ ಸಾಕ್ಷಿ ಶನಿವಾರ ಸಂಜೆ ಅನಾಟಮಿ ಬ್ಲಾಕ್‌ನತ್ತ ಹೋಗಿದ್ದನ್ನು ತಮ್ಮ ಸ್ನೇಹಿತೆ ನೋಡಿದ್ದಾಗಿಯೂ, ನಂತರ ಶಿವಾನಂದನ ಜೊತೆ ಫೋನ್‌ನಲ್ಲಿ ಮಾತನಾಡಿದಾಗ ಅವಳು ಅಲ್ಲಿಯೇ ಇದ್ದುದಾಗಿಯೂ ಹೇಳಿದ್ದಳು. ಡಾಕ್ಟರ್ ಶಿವಾನಂದ ಅವರನ್ನು ಕರೆಯಿಸಿ ವಿಚಾರಿಸಲಾಗಿ ಮಾನಸಿಗೆ ಹೇಳಿದ್ದನ್ನೇ ಆತನೂ ಹೇಳಿದ್ದ. ಸಾಕ್ಷಿ ತಾಯಿಯು ಶಿವಾನಂದನನ್ನು ಅಪ್ಪಿಕೊಂಡು ಅಳಲಾರಂಭಿಸಿದರು. ಶಿವಾನಂದ ಅವರನ್ನು ಸಾಂತ್ವನಗೊಳಿಸತೊಡಗಿದ್ದ. ಅಷ್ಟರಲ್ಲಿ ಪ್ರಿನ್ಸಿಪಾಲರು ಪೊಲೀಸರಿಗೆ ಫೋನ್ ಮಾಡಿದ್ದರಿಂದ ಅವರೂ ಬಂದು ಸೇರಿದ್ದರು. ಎಲ್ಲವನ್ನು ಕೇಳಿದ ಬಳಿಕ ಸಾಕ್ಷಿ 'ನಾಪತ್ತೆ' ಎಂದು ಹೇಳಿದ ಇನ್‌ಸ್ಪೆಕ್ಟರ್ ಕುಲಕರ್ಣಿಯವರು ಪ್ರಿನ್ಸಿಪಾಲ್ ಮತ್ತು ವಾರ್ಡನ್ ಅವರ ಹೇಳಿಕೆ ಪಡೆದು, ದೂರಿನ ಪ್ರತಿ ತೆಗೆದುಕೊಂಡು, ಸಾಕ್ಷಿಯ ತಂದೆಯತ್ತ ತಿರುಗಿ, 'ನೀವು ಕೂಡ ನಮ್ಮ ಸ್ಟೇಷನ್‌ಗೆ ಬಂದು ಒಂದು ಕಂಪ್ಲೇಂಟ್ ಬರೆದುಕೊಡಿ. ಜೊತೆಗೆ ನಿಮ್ಮ ಮಗಳ ಒಂದು ಫೋಟೊ ಸಹ ಕೊಡಿ...' ಎಂದು ಹೇಳಿ, 'ಮತ್ತೆ ಅವಶ್ಯಕತೆ ಇದ್ದಾಗ ಇಲ್ಲಿಗೆ ಬರಬೇಕಾಗುತ್ತದೆ ಸರ್. ನೀವು ಸಹಕಾರ ನೀಡಬೇಕು...' ಎಂದು ಹೇಳಿ ಅಲ್ಲಿಂದ ತಾವು ಬಂದಿದ್ದ ಜೀಪ್‌ನಲ್ಲಿ ಹೊರಟು ಹೋದರು.

ಸಾಕ್ಷಿಯ ತಂದೆತಾಯಿ ಸಾಕ್ಷಿ ಪತ್ತೆಯಾಗುವವರೆಗೂ ಸಿಟಿಯಲ್ಲಿ ಲಾಡ್ಜ್ ಮಾಡಿಕೊಂಡು ಇರುತ್ತೇವೆ ಎಂದು ಶಿವಾನಂದನನ್ನು ಕರೆದುಕೊಂಡು ಹೋದರು. ವಾರ್ಡನ್ ಅವರು ಅಲ್ಲಿಂದ ಹೊರಟ ನಂತರ ಮಾನಸಿ ಮತ್ತು ಮೀರಾ ಕಾಲೇಜಿಗೆ ಹೋಗಲು ಮನಸ್ಸಾಗದೇ ಸೀದಾ ಹಾಸ್ಟೆಲಿಗೆ ಬಂದು ಬಿಟ್ಟರು.

ಸಾಕ್ಷಿ ನಾಪತ್ತೆಯಾಗಿದ್ದಳು. ಅವಳ ಶೋಧಕ್ಕಾಗಿ ಪ್ರಿನ್ಸಿಪಾಲರು ಪೊಲೀಸ್ ಇಲಾಖೆಯ ಸಹಾಯ ಕೋರಿದ್ದರು. ಪ್ರಿನ್ಸಿಪಾಲ್ ಅವರ ಛೇಂಬರಿನಲ್ಲಿ ನಡೆದ ಸುದೀರ್ಘವಾದ ಚರ್ಚೆಯಿಂದ ಮೀರಾ ಮತ್ತು ಮಾನಸಿ ಭೂಮಿಗಿಳಿದು ಹೋಗಿದ್ದರು. ಸಾಕ್ಷಿಯ ಬಗ್ಗೆ ಮಾತನಾಡಲು ಏನೂ ಉಳಿದಿರಲಿಲ್ಲ. ಸಂಜೆಯೊಳಗೆ ಸಾಕ್ಷಿಯ ನಾಪತ್ತೆ, ಪೊಲೀಸರು ಬಂದು ಹೋಗಿದ್ದು, ಇಡೀ ಕಾಲೇಜು, ಆಸ್ಪತ್ರೆ, ವಾರ್ಡುಗಳು, ಹಾಸ್ಟೆಲ್‌ಗಳಿಗೆಲ್ಲಾ ಬೆಂಕಿಯಂತೆ ಹರಡಿತು. ಎಲ್ಲಿ ಹೋದರೂ ಅದೇ ವಿಷಯದ ಬಿಸಿ ಬಿಸಿ ಚರ್ಚೆ.

ಇನ್‌ಸ್ಪೆಕ್ಟರ್ ಕುಲಕರ್ಣಿಯವರು ಪ್ರಿನ್ಸಿಪಾಲ್‌ರಿಗೆ ಸಾಕ್ಷಿ ಸ್ನಾತಕೋತ್ತರ ಪದವಿಗಾಗಿ ಓದುತ್ತಿದ್ದ ಪೆಥಾಲಜಿ ವಿಭಾಗ ಮತ್ತು ಸಾಕ್ಷಿಯು ಕೊನೆಯದಾಗಿ ಅನಾಟಮಿ ಬ್ಲಾಕ್ ಬಳಿ ಹೋಗಿದ್ದುದರಿಂದ ಆ ಎರಡೂ ವಿಭಾಗಗಳಲ್ಲಿ ದೀರ್ಘವಾದ ಪತ್ತೆಕಾರ್ಯ ಹಾಗೂ ವಿಚಾರಣೆ ನಡೆಸಬೇಕಾಗುವುದೆಂದು